17101

**ಪ್ರಥಮ ಸೆಮಿಸ್ಟರ್ ಬಿ.ಕಾಂ./ಬಿ.ಬಿ.ಎಂ. ಪದವಿ ಪರೀಕ್ಷೆ, ಸೆಪ್ಟೆಂಬರ್ 2020**
**ಕನ್ನಡ ಭಾಷಾ ಪತ್ರಿಕೆ – I (ಸಿ.ಬಿ.ಸಿ.ಎಸ್. – ಸ್ಕೀಂ)**
**"ಕನ್ನಡ ದೀಪ"**

ಅವಧಿ : 3 ಗಂಟೆಗಳು ಅಂಕಗಳು : 80

I. ಅ) **ಒಂದು** ಪದ್ಯದ ಸಂದರ್ಭ ಸೂಚಿಸಿ ಭಾವ ಸ್ವಾರಸ್ಯ ಬರೆಯಿರಿ : **(1×7=7)**

1) ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸಲೆ ಕಂತು ಪುಷ್ಪಾಂಜಳಿಯಂ
ಸೂಸಿದ ಪದದೊಳೆ ಸಭೆಗಂ
ಸೂಸಿದನೊಡನೊಡನೆ ನನೆಯ ಮೊನೆಯಂಬುಗಳಂ

**ಅಥವಾ**

2) ಕುವರನಾದೊಡೆ ಬಂದ ಗುಣವೇನದರಿಂದ
ಕುವರಿಯಾದೊಡೆ ಕುಂದೇನು
ಇವರಿರ್ವರೊಳೇಳ್ಗೆವಡೆದವರಿಂದ
ಸವನಿಪುದಿಹಪರ ಸೌಖ್ಯ

ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **(8×½=4)**

ನಿಮಿತ್ತ, ಭೂಷಣ, ತೊತ್ತು, ತೊಪ್ಪ, ಕೈಗೆಡೆ, ಗುಹ್ಯ, ಪಾರ್ವಂತಿ, ನಿಷ್ಪತ್ತಿ, ಒರೆ, ವಸನ, ನಿಗಬೆ, ನಿರ್ವೇಗ.

ಇ) **ಮೂರಕ್ಕೆ** ಟಿಪ್ಪಣಿ ಬರೆಯಿರಿ : **(3×3=9)**

1) ಊಹಾತೀತ
2) ದಂಡಿ
3) ಉದ್ಯಮಶೀಲತೆ
4) ಹಿರೋಶಿಮಾ
5) ಚಾಮರಸ.

P.T.O.

II. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : (2×10=20)

1) ವಾಯುಭೂತಿ ಗುರುವನ್ನು ನಿಂದಿಸಿ ನಡೆದ ಪರಿಣಾಮವೇನಾಯಿತು ? ವಿವರಿಸಿ.

2) ಸಂಚಿ ಹೊನ್ನಮ್ಮನ ಸ್ತ್ರೀ–ಪರ ಧೋರಣೆಯನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

3) 'ಮಂಕುತಿಮ್ಮನ ಕಗ್ಗ'ದಲ್ಲಿ ಬರುವ ಜೀವನ ಮೌಲ್ಯಗಳನ್ನು ವಿವರಿಸಿ.

III. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : (2×10=20)

1) ಸತ್ಯಕಾಮರ 'ದುರಂತ ಧರ್ಮ'ದಲ್ಲಿ ಭೀಷ್ಮನ ಪಾತ್ರ ಹೇಗೆ ಅಭಿವ್ಯಕ್ತಗೊಂಡಿದೆ. ವಿವರಿಸಿ.

2) ಬುದ್ಧನ ಶಾಂತಿ ಸಂದೇಶದ ಮಹತ್ವವನ್ನು ಕುರಿತು ಬರೆಯಿರಿ.

3) ಏಕೈಕ ಮಹಿಳಾ ಶಾಸನದ ವಿಶೇಷತೆ ಏನು ? ತಿಳಿಸಿ.

IV. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : (2×10=20)

1) ವರ್ಣವ್ಯವಸ್ಥೆ ಭಾರತದ ಅಭಿವೃದ್ಧಿಗೆ ಹೇಗೆ ಪೂರಕವಾಗಿದೆ ? ಚರ್ಚಿಸಿ.

2) ಅಣು ಸಮರದ ಭೀಕರ ಪರಿಣಾಮಗಳನ್ನು ವಿವರಿಸಿ.

3) ಮುಸ್ಲಿಂ ಹುಡುಗನ ಕನ್ನಡ ಪ್ರೇಮವನ್ನು ಕುರಿತು ಬರೆಯಿರಿ.

---